**ಗದ್ಯ – 3** | **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ**

## ಪ್ರಶ್ನೋತ್ತರಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ:

**ಪ್ರಶ್ನೆ 1:**

**ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?**

**ಉತ್ತರ:**

ಪುಟ್ಟರಾಜರ ತಂದೆ ರೇವಣ್ಣಯ್ಯ ಮತ್ತು ತಾಯಿ ಸಿದ್ಧಮ್ಮ.

**ಪ್ರಶ್ನೆ 2:**

**ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?**

**ಉತ್ತರ:**

ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.

**ಪ್ರಶ್ನೆ 3:**

**ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?**

**ಉತ್ತರ:**

ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ, ಸೆರಗೊಡ್ಡಿ ತನ್ನ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು.

**ಪ್ರಶ್ನೆ 4:**

**ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?**

**ಉತ್ತರ:**

ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು.

**ಪ್ರಶ್ನೆ 5:**

**ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?**

**ಉತ್ತರ:**

ಪುಟ್ಟರಾಜರು ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸುವುದಕ್ಕಾಗಿ ಖಾದಿ ಬಟ್ಟೆಯನ್ನು ತೊಡಲು ನಿರ್ಧರಿಸಿದರು.

## ಆ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:

**ಪ್ರಶ್ನೆ 1:**

**ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ?**

**ಉತ್ತರ:**

ಬಾಲಕ ಪುಟ್ಟಯ್ಯರವರು ಹುಟ್ಟಿದ ಆರು ತಿಂಗಳಿಗೆ ಕಣ್ಣಿಗೆ ರೋಗ ಬಂದಿತು. ಆಗಿನ ಕಾಲದಲ್ಲಿ ಬರೀ ನಾಟೀ ವೈದ್ಯವಿತ್ತು. ನಾಟೀ ವೈದ್ಯರು ಕಣ್ಣುಗುಡ್ಡೆಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕು ಎಂದು ಹೇಳಿದರು. ಅದೇ ರೀತಿ ಮುಟ್ಟಿಸುವಾಗ ಹುಳು ಕೈಜಾರಿ ಕಣ್ಣು ಒಳಗೆ ಬಿದ್ದುಬಿಟ್ಟವು. ಅದು ಅರಿ ಹರಿಯುವುದರ ಬದಲು, ಕಣ್ಣು ಗುಡ್ಡೆಯನ್ನೇ ಹರಿದು ಹಾಕಿತು. ಈ ರೀತಿ ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡರು.

**ಪ್ರಶ್ನೆ 2:**

**ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ?**





**ಉತ್ತರ:**

ಸಂಗೀತ ಲೋಕದ ಜಗದ್ಗುರು ಪಂಡಿತ ಪಂಚಾಕ್ಷರಿ ಗವಾಯಿಗಳ 'ಸಂಚಾರಿ ಸಂಗೀತ ಪಾಠಶಾಲೆ' ಒಮ್ಮೆ ಗವಿಮಠದಲ್ಲಿ ಕ್ಯಾಂಪ್ (ವಾಸ) ಮಾಡಿತ್ತು. ಬಾಲಕ ಪುಟ್ಟಯ್ಯನವರು ತನ್ನ ಮಾವನವರಾದ ಚಂದ್ರಶೇಖರಯ್ಯನವರೊಂದಿಗೆ ಅಲ್ಲಿಗೆ ಬಂದರು. ಗುರುಗಳಾದ ಪಂಚಾಕ್ಷರಿ ಗವಾಯಿಗಳನ್ನು ನೋಡಿ, ಚಂದ್ರಶೇಖರಯ್ಯನವರು ಪುಟ್ಟಯ್ಯರವರನ್ನು ಗುರುಗಳಿಗೆ ಒಪ್ಪಿಸಿದರು. ಬಾಲಕ ಪುಟ್ಟಯ್ಯ, ಪಂಚಾಕ್ಷರಿ ಗವಾಯಿಗಳಿಂದ ಶಿಷ್ಯತ್ವ ಸ್ವೀಕರಿಸಿ ಪ್ರೀತಿಯ ಶಿಷ್ಯರೆಲ್ಲರಲ್ಲಿ ಒಬ್ಬರಾದರು.

**ಪ್ರಶ್ನೆ 3:**

**ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಮನಸ್ಥಿತಿ ಹೊಂದಿದ್ದನು?**

**ಉತ್ತರ:**

"ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೇ ಮಂತ್ರವಾಗಬೇಕು, ಅವರ ನಡೆಯೇ ಆಚಾರವಾಗಬೇಕು" ಎಂಬುದು ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯನವರ ಮನಸ್ಥಿತಿಯಾಗಿತ್ತು.

**ಪ್ರಶ್ನೆ 4:**

**ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?**

**ಉತ್ತರ:**

ಪುಟ್ಟರಾಜ ಗವಾಯಿಗಳು ಪುಟ್ಟಯ್ಯ ಪಾಣಿನಿಯ 'ಅಷ್ಟಾಧ್ಯಾಯಿ', ಶರ್ಮವರ್ಮನ 'ಕಾತಂತ್ರ' ಕೇಶಿರಾಜನ 'ಶಬ್ದಮಣಿ ದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶ್ಶಾಸ್ತ್ರ ಹಾಗೂ ಕನ್ನಡ ವ್ಯಾಕರಣಗಳಲ್ಲಿ ನಿಷ್ಣಾತರಾದರು.





**ಪ್ರಶ್ನೆ 5:**

**ತಾಯಿ ಸಿದ್ಧಮ್ಮ ಪುಟ್ಟರಾಜನನ್ನು ಏನೆಂದು ಆಶೀರ್ವದಿಸಿದಳು?**

**ಉತ್ತರ:**

ತಾಯಿ ಸಿದ್ಧಮ್ಮ "ನಿನ್ನಂಥ ಶ್ರೇಷ್ಠ ಪುತ್ರರತ್ನವೊಂದನ್ನು ಹೆತ್ತ ಭಾಗ್ಯ ನನ್ನದಾಗಲಿ. ಹೆಂಡತಿ, ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ. ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನೀನು ನಡೆದು ಅಮರನಾಗು ಕಂದ" ಎಂದು ತನ್ನ ಮಗನನ್ನು ಅಂತಃಕರಣ ತುಂಬಿ ಹರಸಿ, ಆಶೀರ್ವದಿಸಿದಳು.

**ಪ್ರಶ್ನೆ 6:**

**ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?**

**ಉತ್ತರ:**

ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ (ದೋತರ), ತಲೆಗೆ ಕೆಂಪು ಪೇಠ (ಪಟಗ), ನೊಸಲಲ್ಲಿ ತ್ರಿಪುಂಡ್ರಭಸ್ಮ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಆವುಗೆಗಳು, ಕೈಯಲ್ಲಿ ಉದ್ದನೆಯ ಬೆತ್ತ–ಇವು ಪುಟ್ಟರಾಜರ ಬಾಹ್ಯ ವ್ಯಕ್ತಿತ್ವದ ವೇಷಭೂಷಣಗಳಾಗಿವೆ.

**ಪ್ರಶ್ನೆ 7:**

**ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?**

**ಉತ್ತರ:**

ಪುಟ್ಟರಾಜರು ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ 35ಕ್ಕೂ ಅಧಿಕ ಕೃತಿಗಳನ್ನು ರಚಿಸಿ, ತ್ರಿಭಾಷಾ

ಕವಿಯಾದರು. ಅವರ ಈ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಮುಂತಾದ ಗೌರವ ಪ್ರಶಸ್ತಿಗಳು ಲಭಿಸಿದೆ.

**ಪ್ರಶ್ನೆ 8:**

**ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ?**

**ಉತ್ತರ:**

ಉನ್ನತವಾದ ಗುರಿಯನ್ನು ಬೆಂಬತ್ತಲು ಯಾವುದೇ ರೀತಿಯ ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು. ಅದರೊಂದಿಗೆ ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವೂ ಸೇರಿಕೊಂಡರೆ ಗುರಿಯೂ ಹತ್ತಿರವಾಗುತ್ತದೆ. ಆದ್ದರಿಂದ ಯಾವುದೇ ಅಂಗವೈಕಲ್ಯವಿದ್ದರೂ ಸಕಾರಾತ್ಮಕ ಚಿಂತನೆ ಮಾಡುವುದರ ಮೂಲಕ ಗುರಿಯನ್ನು ಸಾಧಿಸಬೇಕು. ಪೂರ್ಣಾಂಗದವರಿಗೆ ಮಾದರಿಯಾಗಬೇಕು.

## ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:

**ಪ್ರಶ್ನೆ 1:**

**ಅಂಗಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ, ಹೇಗೆ? ಸಮರ್ಥಿಸಿರಿ.**

**ಉತ್ತರ:**

ಸಾಧನೆಗೆ ಅಂಗಹೀನತೆಯು ಎಂದೂ ಕೂಡ ಅಡ್ಡಿಯಾಗದು ಎಂಬುದು ಪುಟ್ಟರಾಜರ ವಿಷಯದಲ್ಲಿ ನಿಜವಾಗಿದೆ. ಸ್ವರಮಂಡಲ, ಸಾರಂಗಿ, ಸಾರೋಟ, ಪಿಟೀಲು, ಹಾರ್ಮೋನಿಯಂ, ತಬಲ ವಾದ್ಯಗಳನ್ನು ನುಡಿಸುವುದರಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತದ ಹಾಡುಗಾರಿಕೆಯಲ್ಲಿ ಸಿದ್ಧಿಯನ್ನು ಗಳಿಸಿದರು. ಓದಿನಲ್ಲಿ ಬ್ರೈಲ್ ಲಿಪಿಯನ್ನು ಕಲಿತರು. ಪುಟ್ಟರಾಜರು ಕನ್ನಡ,

ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅಗಾಧ ಪಾಂಡಿತ್ಯ ಗಳಿಸುವುದರೊಂದಿಗೆ ಗಾಯನ, ವಾದನ, ಸಾಹಿತ್ಯ, ಕೀರ್ತನ ಮೊದಲಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿ 'ಜ್ಞಾನಯೋಗಿ', 'ಗಾನಯೋಗಿ' ಎಂದು ಪ್ರಸಿದ್ಧರಾದರು. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ 75 ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಅವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ, ಗೌರವ ಡಾಕ್ಟರೇಟ್ ಮುಂತಾದ ಗೌರವ ಪ್ರಶಸ್ತಿಗಳು ಸಾಲುಗಟ್ಟಿ ಬಂದವು. ಹೀಗೆ ಸಂಗೀತ ಲೋಕದ ಧ್ರುವ ನಕ್ಷತ್ರರಾಗಿ ಸಾವಿರಾರು ಶಿಷ್ಯರ ಬದುಕಿಗೆ ದಿವ್ಯಬೆಳಕಾದ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳು ದಿನಾಂಕ 17–09–2010 ರಂದು ಅನಂತದಲ್ಲಿ ಅನಂತವಾದರು, ಇತಿಹಾಸದಲ್ಲಿ ಅಮರರಾದರು. ಸಾಧನೆಗೆ ಅಂಗಹೀನತೆ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಾಗಿಲ್ಲ.

**ಪ್ರಶ್ನೆ 2:**

**ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ.**

**ಉತ್ತರ:**

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ತಲ್ಲೀನವಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಂನಿಂದ ಹೊರಟ ನಾದ ಮನೆಯನ್ನು ತುಂಬಿ ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯ ಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಂ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಭಾವಿಸಿ, ಒಳಗೆ ಬಂದರು. ತಲ್ಲೀನನಾಗಿ ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು.

**ಪ್ರಶ್ನೆ 3:**

**ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.**

**ಉತ್ತರ:**

ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ ಅಲೂರಿನಲ್ಲಿ ಕ್ಯಾಂಪ್ ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ಧಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ತನ್ನ ಮುದ್ದು ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿ ಬಂದಿತು. ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು 'ಅವನು ಬಂದರೆ ಕರೆದುಕೊಂಡು ಹೋಗಿ ತಾಯಿ' ಎಂದು ವಾತ್ಸಲ್ಯಪೂರ್ಣವಾಗಿ ಹೇಳಿದರು. ಸಿದ್ಧಮ್ಮನವರು ಪುಟ್ಟಯ್ಯನೆಡೆಗೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಹೇಳಿದರು. 'ನನಗೆ ನನ್ನ ಸರ್ವಸ್ವವೂ ಗುರುಗಳು. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಹೇಗೆ ನಿನ್ನ ಜೊತೆ ಬರಲಿ!' ಎಂದು ತಾಯಿಯನ್ನು ಕೇಳಿದರು. 'ನಾನು ಎಲ್ಲಾ ಬಂಧಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನ ಸಮಾಜಕ್ಕೆ ಅರ್ಪಿಸು ತಾಯಿ' ಎಂದು ಹೇಳಿದರು.

**ಪ್ರಶ್ನೆ 4:**

**ವಿಶೇಷ ಚೇತನರ ವಿಷಯದಲ್ಲಿ ನಮ್ಮ ಹೊಣೆಗಾರಿಕೆಗಳೇನು?**

**ಉತ್ತರ:**

ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವಿದ್ದರೆ ಯಾವ ವಿಶೇಷ ಚೇತನವು ಅಡ್ಡಿಪಡಿಸಲಾರದು. ಇದಕ್ಕೆ ಬಹುಮುಖ್ಯ ಉದಾಹರಣೆ ಅಂಗವಿಕಲರ ಒಲಂಪಿಕ್ಸ್. ಮಾಲತಿ ಹೊಳ್ಳರವರು ಅಂಗವಿಕಲರಾಗಿದ್ದರೂ

ಕ್ರೀಡಾಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದರು. ಭರತನಾಟ್ಯದಲ್ಲಿ ಸುಧಾಚಂದ್ರನ್ ಅತ್ಯುತ್ತಮ ಸಾಧನೆಯನ್ನು ಮಾಡಿದರು. ಹೀಗೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಇವರೆಲ್ಲರ ಸಾಧನೆ ಸಾಮಾನ್ಯ ಜನರಿಗೆ ಆದರ್ಶವಾಗಿದೆ. ವಿಕಲಾಂಗರ ವಿಷಯದಲ್ಲಿ ಸಾಮಾನ್ಯರ ಹೊಣೆಗಾರಿಕೆಯೆಂದರೆ ಅವರಲ್ಲಿ ಮೊದಲಿಗೆ ಆತ್ಮಾಭಿಮಾನವನ್ನು ತುಂಬಬೇಕು. ಯಾವುದೇ ಕಾರಣಕ್ಕೂ ಅವರನ್ನು ಬೇರೆ ದೃಷ್ಟಿಯಿಂದ ಕಾಣಬಾರದು. ಸಕಾರಾತ್ಮಕ ಚಿಂತನೆಗೆ ಅವಕಾಶ ಮಾಡಿಕೊಡಬೇಕು. ಅವರಲ್ಲಿ ಕೀಳರಿಮೆ ಬೆಳೆಯದಂತೆ ನೋಡಿಕೊಳ್ಳಬೇಕು. ಸಮಾಜದಲ್ಲಿ ಅವರು ಎಲ್ಲರ ಸಮಾನರಂತೆ ಬದುಕಲು ಪ್ರೇರಣೆಯನ್ನು ನೀಡಬೇಕು.

## ಈ. ಸಂದರ್ಭದೊಡನೆ ವಿವರಿಸಿರಿ:

**1. “ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು”.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು ‘ರಮೇಶಗೌಡ ಎಂ. ಕೆ.’ ರವರು ಬರೆದಿರುವ ‘ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ’ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಪುಟ್ಟರಾಜ ಗವಾಯಿ ಹುಟ್ಟಿದ ಆರು ತಿಂಗಳಿಗೆ ಕಣ್ಣು ಕಳೆದುಕೊಂಡರು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**ವಿವರಣೆ:** ಬಾಲಕ ಪುಟ್ಟಯ್ಯರವರು ಹುಟ್ಟಿದ ಆರು ತಿಂಗಳಿಗೆ ಕಣ್ಣಿಗೆ ರೋಗ ಬಂದಿತು. ಆಗಿನ ಕಾಲದಲ್ಲಿ ಬರೀ ನಾಟೀ ವೈದ್ಯ ಇತ್ತು. ನಾಟೀ ವೈದ್ಯರು ಕಣ್ಣುಗುಡ್ಡೆಗೆ ನಾಯಿಯ ಮೈಯಲ್ಲಿರುವ ಹುಳು ಮುಟ್ಟಿಸಬೇಕು ಎಂದು ಹೇಳಿದರು. ಆಗ ಮುಟ್ಟಿಸುವಾಗ ಹುಳು ಕೈಜಾರಿ ಕಣ್ಣು ಒಳಗೆ ಬಿದ್ದುಬಿಟ್ಟವು. ಅದು ಅರಿ ಹರಿಯುವುದರ ಬದಲು, ಕಣ್ಣು ಗುಡ್ಡೆಯನ್ನೇ ಹರಿದು ಹಾಕಿತು. ಈ ರೀತಿ ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡರು.

**ವಿಶೇಷತೆ:** ಪುಟ್ಟರಾಜಗವಾಯಿಯವರು ಮೇಲಿನ ಸಂದರ್ಭದಲ್ಲಿ ಅವರು ಕಣ್ಣು ಕಳೆದುಕೊಂಡ ಪರಿಯನ್ನು ಹೇಳುವಾಗ ಅವರ ಮನಸ್ಸಿನಲ್ಲಿ ಯಾವುದೇ ತರಹದ ವೇದನೆಯೂ ಇಲ್ಲದೇ ಹೇಳಿರುವುದು ವಿಶೇಷವಾಗಿದೆ.

**2. ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ರಮೇಶಗೌಡ ಎಂ. ಕೆ.' ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಪುಟ್ಟರಾಜರು ತಮ್ಮ ಮಾವನ ಹಾರ್ಮೋನಿಯಮ್ ನುಡಿಸುವ ಸಂದರ್ಭದಲ್ಲಿ ಮಾವ ಚಂದ್ರಶೇಖರಯ್ಯನವರು ಈ ಮೇಲಿನ ಮಾತುಗಳನ್ನು ಹೇಳುತ್ತಾರೆ.

**ವಿವರಣೆ:** ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದರು. ಹಾರ್ಮೋನಿಯಮ್‌ನಿಂದ ಹೊರಟ ನಾದ ಮನೆಯನ್ನು ತುಂಬಿ, ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರಲ್ಲೆರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಮಾವ ಚಂದ್ರಶೇಖರಯ್ಯನವರು ಹೊರಗೆ ಮತ್ತು ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು. ಒಳಗೆ ಹಾರ್ಮೋನಿಯಮ್ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಭಾವಿಸಿ, ಒಳಗೆ ಬಂದರು. ಮನೆಯ ಒಳಗೆ ಹಾರ್ಮೋನಿಯಮ್ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡರು. ಮಾವನ ಪಾದದ ಸಪ್ಪಳದಿಂದ ವಿಚಲಿತನಾದ ಬಾಲಕ ಒಮ್ಮೆಲೇ ಹಾರ್ಮೋನಿಯಮ್ ನುಡಿಸುವುದನ್ನು ನಿಲ್ಲಿಸಿ, ತಮ್ಮ ಮಾವನ ಬಳಿಗೆ ಬಂದು 'ಹಾರ್ಮೋನಿಯಮ್ ನುಡಿಸಿದ್ದಕ್ಕಾಗಿ ಕ್ಷಮಿಸಿ' ಎಂದು ಹೇಳಿದರು. 'ಇನ್ನು ಮುಂದೆ ತಾವು ಹಾರ್ಮೋನಿಯಮ್ ಮುಟ್ಟುವುದಿಲ್ಲ' ಎಂದು ಹೇಳಿದಾಗ ಮಾವ ಚಂದ್ರಶೇಖರಯ್ಯನವರು ಈ ಮೇಲಿನ ಮಾತುಗಳನ್ನು ಹೇಳಿದರು.

**ವಿಶೇಷತೆ:** ಪುಟ್ಟಯ್ಯನವರು ಅಂಧರಾಗಿದ್ದರೂ ಹಾರ್ಮೋನಿಯಮ್ ನುಡಿಸಿರುವುದು ಮೇಲಿನ ಸಂದರ್ಭದ ವೈಶಿಷ್ಟ್ಯವಾಗಿದೆ.

**3. ಅವನು ಬಂದರೆ ಕರೆದುಕೊಂಡು ಹೋಗು ತಾಯಿ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ರಮೇಶಗೌಡ ಎಂ. ಕೆ.' ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಪುಟ್ಟರಾಜರ ತಾಯಿ ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ತನ್ನ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡ ಸಂದರ್ಭದಲ್ಲಿ ಈ ಮೇಲಿನ ಮಾತುಗಳನ್ನು ಗವಾಯಿಗಳು ಹೇಳಿರು.

**ವಿವರಣೆ:** ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯು ಹೊಳೆ–ಆಲೂರಿನಲ್ಲಿ ಕ್ಯಾಂಪ್ (ಬಿಡಾರ) ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ಧಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ತನ್ನ ಮುದ್ದು ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿ ಬಂದಿತು. ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು "ಅವನು ಬಂದರೆ ಕರೆದುಕೊಂಡು ಹೋಗು ತಾಯಿ" ಎಂದು ವಾತ್ಸಲ್ಯಪೂರ್ಣವಾಗಿ ಹೇಳಿದರು.

**ವಿಶೇಷತೆ:** ಪಂಚಾಕ್ಷರ ಗವಾಯಿಗಳ ವಾತ್ಸಲ್ಯಪೂರ್ಣತೆಯ ಹಿತನುಡಿ ಹಾಗೂ ಅವರ ವಿನಯತೆಯ ಮಾತುಗಳು ಈ ಸಂದರ್ಭದಲ್ಲಿ ವ್ಯಕ್ತವಾಗಿವೆ.

**4. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ರಮೇಶಗೌಡ ಎಂ. ಕೆ.' ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಪುಟ್ಟರಾಜರ ತಾಯಿ ಸಿದ್ಧಮ್ಮನವರು ಪುಟ್ಟಯ್ಯನ ಹತ್ತಿರ ಬಂದು ಮನೆಗೆ ಬರುವಂತೆ ಕೇಳಿಕೊಳ್ಳುವ ಸಂದರ್ಭದಲ್ಲಿ ಪುಟ್ಟರಾಜರು ಈ ಮೇಲಿನ ಮಾತುಗಳನ್ನು ಮೃದುವಾಗಿ ತಾಯಿಗೆ ಹೇಳಿದರು.

**ವಿವರಣೆ:** ಸಿದ್ಧಮ್ಮನವರು ಪುಟ್ಟಯ್ಯನೆಡೆಗೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಮನವರಿಕೆ ಮಾಡಿಕೊಟ್ಟರು. "ನನಗೆ ನನ್ನ ಸರ್ವಸ್ವವೂ ಗುರುಗಳು. ಅವರು ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು? ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ. ಗುರು ಪಂಚಾಕ್ಷರರೇ ನನ್ನ ಸರ್ವಸ್ವ. ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದು ಹಾಕಿ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ" ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

**ವಿಶೇಷತೆ:** ಪುಟ್ಟಯ್ಯನವರು ತಮ್ಮ ಸಮಸ್ತ ಜೀವನವನ್ನು ಸಮಾಜಕ್ಕೆ ಮುಡಿಪಾಗಿ ಇಟ್ಟಿರುವುದು ಈ ಸಂದರ್ಭದ ವಿಶೇಷವಾಗಿದೆ.

**5. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು.**

**ಉತ್ತರ:** ಪ್ರಸ್ತುತ ಈ ವಾಕ್ಯವನ್ನು 'ರಮೇಶಗೌಡ ಎಂ. ಕೆ.' ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಪುಟ್ಟರಾಜ ಗವಾಯಿಗಳಲ್ಲಿನ ಶಿಷ್ಯತ್ವವನ್ನು ವಿವರಿಸಿ ಹೇಳುವಾಗ ಮೇಲಿನ ವಾಕ್ಯವನ್ನು ಲೇಖಕರು ಹೇಳಿದ್ದಾರೆ.

**ವಿವರಣೆ:** ಪುಟ್ಟರಾಜ ಗವಾಯಿಯವರು "ನಾನೊಬ್ಬ ಅಂಧ ಬಾಲಕ, ನನ್ನಿಂದೇನಾಗಲು ಸಾಧ್ಯ? ಜಗತ್ತು ನೋಡದ ನನಗೆ ಜಗತ್ತಿಗೆ ಏನು ಕೊಡಲು ಸಾಧ್ಯ? ಇದ್ದಷ್ಟು ದಿನ ಗುರುಸೇವೆ ಮಾಡುತ್ತ ಊಟ ಸಿಕ್ಕಲ್ಲಿ ಹೊಟ್ಟೆಹೊರೆದು, ನೆಲ ಸಿಕ್ಕಲ್ಲಿ ಶಯನಗೈದು ಈ ಬದುಕನ್ನು ಮುಗಿಸಿದರಾಯಿತು" ಎಂಬ ವಿಷಣ್ಣ ಭಾವದಲ್ಲಿ ಇರುತ್ತಿರಲಿಲ್ಲ. "ಪಂಚಾಕ್ಷರಿ ಗುರುಗಳನ್ನು ಅನುಸರಿಸಬೇಕು. ಅವರ ನುಡಿಯೇ ನನಗೆ ಮಂತ್ರವಾಗಬೇಕು. ಅವರ ನಡೆಯೇ ನನಗೆ ಆಚಾರವಾಗಬೇಕು" ಎಂದು ನಿರ್ಧರಿಸಿದ ಎಂಟು ವರ್ಷದ ಬಾಲಕ ಪುಟ್ಟಯ್ಯ, ತನ್ನ

**ಗದ್ಯ – 3** **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ**

ಎಲ್ಲ ಸಹಪಾಠಿಗಳಿಗಿಂತ ಬಲು ಬೇಗ ಗುರುಗಳು ಹೇಳಿದ್ದನ್ನು ಗ್ರಹಿಸಿ ಕಲಿತುಕೊಳ್ಳುತ್ತಿದ್ದರು ಎಂದು ಲೇಖಕರು ಹೇಳುವಾಗ ಮೇಲಿನ ಮಾತು ಬಂದಿದೆ.

**ವಿಶೇಷ:** ಗುರು ಶಿಷ್ಯರಿಬ್ಬರು ಅಂಧರಾಗಿದ್ದರೂ, ಅವರ ಅಂತರಂಗದ ಕಣ್ಣು ಅರಳಿತ್ತು ಎಂಬುದು ಇಲ್ಲಿಯ ವಿಶೇಷ.

## ಉ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ:

1. ಪುಟ್ಟರಾಜರ ಜನ್ಮಸ್ಥಳ ________________.

**ಉತ್ತರ: ಹೊಸಪೇಟೆ**

2. ಪುಟ್ಟರಾಜರು ________________ ರಂದು ಜನಿಸಿದರು.

**ಉತ್ತರ: 1914, ಮಾರ್ಚ್ 2**

3. ಪುಟ್ಟರಾಜರ ಗುರುಗಳ ಹೆಸರು ________________.

**ಉತ್ತರ: ಪಂಚಾಕ್ಷರಿ ಗವಾಯಿಗಳು**

4. ಪುಟ್ಟರಾಜರ ಮಾವನ ಹೆಸರು ________________.

**ಉತ್ತರ: ಚಂದ್ರಶೇಖರಯ್ಯ**

5. ಪುಟ್ಟರಾಜರು ____________ ರಂದು ಅನಂತದಲ್ಲಿ ಅನಂತವಾದರು.

**ಉತ್ತರ: 2010, ಸೆಪ್ಟೆಂಬರ್ 17**

## ಊ. 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ಪಾಣಿನಿ | ಅ. ಕೈವಲ್ಯ ಪದ್ಧತಿ |
| 2. ಶರ್ವವರ್ಮ | ಆ. ಶಬ್ದಮಣಿ ದರ್ಪಣ |
| 3. ಕೇಶಿರಾಜ | ಇ. ಅಷ್ಟಾಧ್ಯಾಯಿ |
| 4. ನಿಜಗುಣ ಶಿವಯೋಗಿಗಳು | ಈ. ಕಾತಂತ್ರ |

ಉತ್ತರ: **1 – ಇ; 2 – ಈ; 3 – ಆ; 4 – ಅ.**

## ಭಾಷಾಭ್ಯಾಸ

### ಅ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

**ಅ. ಸಿಂಹಾವಲೋಕನ** – ನಾನು ಪರೀಕ್ಷೆಯ ಸಂದರ್ಭದಲ್ಲಿ ಎಲ್ಲಾ ಪಠ್ಯವನ್ನು ಸಿಂಹಾವಲೋಕನ ಮಾಡುತ್ತೇನೆ.

**ಆ. ನಿಬ್ಬೆರಗಾಗು** – ನಾನು ಧುಮ್ಮಿಕ್ಕಿ ಹರಿಯುತ್ತಿದ್ದ ಜೋಗಜಲಪಾತವನ್ನು ನೋಡಿ ನಿಬ್ಬೆರಗಾದೆನು.

**ಇ. ಕಣ್ಮಣಿ** – ಪುಟ್ಟರಾಜರು ತಮ್ಮ ಗುರುಗಳಿಗೆ ಕಣ್ಮಣಿಯಾಗಿದ್ದರು.

**ಈ. ತಲ್ಲೀನತೆ** – ತರಗತಿಯಲ್ಲಿ ಶಿಕ್ಷಕರು ಪಾಠಬೋಧಿಸುವ ಸಂದರ್ಭದಲ್ಲಿ ನಾನು ಹೆಚ್ಚು ತಲ್ಲೀನತೆಯಿಂದ ಕೇಳಿಸಿಕೊಳ್ಳುತ್ತೇನೆ.

**ಉ. ಗುರುಸೇವೆ** – ಪ್ರತಿಯೊಬ್ಬರು ತಮ್ಮ ಗುರುಗಳ ಸೇವೆಯನ್ನು ಮಾಡಬೇಕು.

**ಊ. ಅಭಿಲಾಷೆ** – ನನಗೆ ಈ ದೇಶವನ್ನು ಪ್ರಗತಿಪೂರಕವಾಗಿ ನೋಡಬೇಕೆಂಬ ಅಭಿಲಾಷೆ ಇದೆ.

**ಋ. ಅಂತಃಕರಣ** – ನಾವು ವಿಶೇಷ ಚೇತನರನ್ನು ಅಂತಃಕರಣದಿಂದ ಮಾತನಾಡಿಸಬೇಕು.





**ಗದ್ಯ – 3** **ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ**

## ಆ. ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ:

**ಅ. ದೃಷ್ಟಿ** – ದಿಟ್ಟಿ

**ಆ. ಸಂಸ್ಕೃತ** – ಸಕ್ಕದ

**ಇ. ಯೋಗಿ** – ಜೋಗಿ

**ಈ. ಆಶ್ಚರ್ಯ** – ಅಚ್ಚರಿ

**ಉ. ಜ್ಞಾನ** – ಜಾನ

## ಇ. ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿರಿ:

**ಅ. ಪಂಚಾಕ್ಷರಿ** – ಪಂಚ + ಅಕ್ಷರಿ = ಸವರ್ಣದೀರ್ಘಸಂಧಿ

**ಆ. ಸುವರ್ಣಾಕ್ಷರ** – ಸುವರ್ಣ + ಅಕ್ಷರ = ಸವರ್ಣದೀರ್ಘಸಂಧಿ

**ಇ. ಇನ್ನೊಂದು** – ಇನ್ನು + ಒಂದು = ಲೋಪಸಂಧಿ

**ಈ. ತನ್ನಿಚ್ಛೆ** – ತನ್ನ + ಇಚ್ಛೆ = ಲೋಪಸಂಧಿ

**ಉ. ತತ್ವಾನುಯಾಯಿ** – ತತ್ವ + ಅನುಯಾಯಿ = ಸವರ್ಣದೀರ್ಘಸಂಧಿ

**ಊ. ರುದ್ರಾಕ್ಷಿ** – ರುದ್ರ + ಅಕ್ಷಿ = ಸವರ್ಣದೀರ್ಘಸಂಧಿ

**ಋ. ಹಿಮಾಲಯ** – ಹಿಮ + ಆಲಯ = ಸವರ್ಣದೀರ್ಘಸಂಧಿ

## ಈ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ:

**ಅ. ಆಸಕ್ತಿ** × ನಿರಾಸಕ್ತಿ

**ಆ. ಶ್ರೇಷ್ಠ** × ಕನಿಷ್ಠ

**ಇ. ಗೌರವ** × ಅಗೌರವ

**ಈ. ಹೊರಗೆ** × ಒಳಗೆ

**ಉ. ಸ್ವೀಕರಿಸು** × ನಿರಾಕರಿಸು

**ಊ. ಬಾಹ್ಯ** × ಆಂತರಿಕ

**ಋ. ಸ್ವದೇಶಿ** × ವಿದೇಶಿ

**ಎ. ಸ್ವಾತಂತ್ರ್ಯ** × ಪರಾತಂತ್ರ್ಯ

## ಸೈದ್ಧಾಂತಿಕ ವ್ಯಾಕರಣ

**ನಾಮಪದ**

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.

**ನಾಮಪದದ ವಿಧಗಳು:**

**1. ವಸ್ತುವಾಚಕ ಅಥವಾ ನಾಮವಾಚಕ:** ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು ವಸ್ತುವಾಚಕಗಳೆನ್ನುವರು. ಇವುಗಳಲ್ಲಿ ಮೂರು ವಿಧ. ಅವುಗಳೆಂದರೆ....

**ಅ. ರೂಢನಾಮ:** ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳನ್ನು 'ರೂಢನಾಮ' ಎಂದು ಕರೆಯುತ್ತಾರೆ.

**ಉದಾ:** ಹೆಂಗಸು, ಗಂಡಸು, ಹುಡುಗ, ಹುಡುಗಿ, ಮಕ್ಕಳು, ಜನರು, ನದಿ, ಬೆಟ್ಟ, ಸಮುದ್ರ, ಕೆರೆ, ಹಳ್ಳ, ಹಳ್ಳಿ, ಗಿಡ, ಮರ, ಹೊಳೆ, ಮುದುಕ, ಮುದುಕಿ, ಹೆಣ್ಣು, ಎಲೆ, ಅಡಿಕೆ, ಹಸು, ಎಮ್ಮೆ, ಬಳ್ಳಿ – ಇತ್ಯಾದಿ

**ಆ. ಅಂಕಿತನಾಮ:** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ. ಅಂದರೆ ವಸ್ತು, ವ್ಯಕ್ತಿ ಹಾಗೂ ಸ್ಥಳಕ್ಕೆ ನೀಡಿರುವ ನಿರ್ದಿಷ್ಟ ಹೆಸರುಗಳು.

**ಉದಾ:** ಗಣೇಶ, ಕಾವೇರಿ, ಗಂಗಾ, ರಾಮ, ರಹೀಮ, ಬೆಂಗಳೂರು, ಧಾರವಾಡ, ಉಡುಪಿ, ಭಾರತ, ಕರ್ನಾಟಕ, ಬೇವು, ಹಲಸು, ಉಪ್ಪಿಟ್ಟು, ಹೋಳಿಗೆ – ಇತ್ಯಾದಿ.

**ಇ. ಅನ್ವರ್ಥನಾಮ:** ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನಾಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳಿಗೆ 'ಅನ್ವರ್ಥನಾಮ' ಎಂದು ಕರೆಯುತ್ತಾರೆ.

**ಉದಾ:** ಜಾಣ, ಕವಿ, ಪಂಡಿತ, ಕುರುಡ, ಮೂಗ, ಕಿವುಡ, ದಡ್ಡ, ದಾನಿ, ಶಿಕ್ಷಕ, ವಿಜ್ಞಾನಿ, ಅಭಿಮಾನಿ, ನೀತಿಜ್ಞ, ಕುಂಟ, ಹೆಳವ, ಗಿಡ್ಡ, ಬೆಪ್ಪ, ಕ್ರೂರಿ, ಪೆದ್ದ, ಬುದ್ಧಿವಂತ, ಧೀರ, ಹೇಡಿ, ಸಾಧು, ಜಿಪುಣ, ಅಷ್ಟಾವಕ್ರ – ಇತ್ಯಾದಿ.

**2. ಗುಣವಾಚಕ:** ವಸ್ತು ಅಥವಾ ವ್ಯಕ್ತಿಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ' ಗುಣವಾಚಕ' ಎನ್ನುವರು. ವಿಶೇಷಣಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂತಹ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ.

| ಉದಾ: | **ವಿಶೇಷಣ** | **ವಿಶೇಷ್ಯ** |
|---|---|---|
| | ಸಿಹಿ | ಹಣ್ಣು |
| | ದೊಡ್ಡ | ನದಿ |
| | ಒಳ್ಳೆಯ | ಹುಡುಗಿ |

**3. ಸಂಖ್ಯಾವಾಚಕ:** ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾ ವಾಚಕಗಳು.

**ಉದಾ:** ಒಂದು, ಎರಡು, ಮೂರು, ಹತ್ತು, ಸಾವಿರ, ಲಕ್ಷ, ಕೋಟಿ.... ಇತ್ಯಾದಿಗಳು

**4. ಸಂಖ್ಯೇಯವಾಚಕ:** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೆಲ್ಲಾ ಸಂಖ್ಯೇಯ ವಾಚಕಗಳು. ಕೆಳಗಿನ ಉದಾಹರಣೆಯಲ್ಲಿ ಸಂಖ್ಯಾವಾಚಕ ಮತ್ತು ಸಂಖ್ಯೇಯ ವಾಚಕಗಳಿಗಿರುವ ವ್ಯತ್ಯಾಸವನ್ನು ತಿಳಿಯಿರಿ.

| ಉದಾ: | ಸಂಖ್ಯಾವಾಚಕ | ಸಂಖ್ಯೇಯವಾಚಕ |
|---|---|---|
| | ಎರಡು | ಇಬ್ಬರು, ಎರಡನೆಯ. |
| | ಮೂರು | ಮೂವರು, ಮೂರನೆಯ, ಮೂರರಿಂದ. |
| | ಐದು | ಐವರು, ಐದನೆಯ. |

**5. ಭಾವನಾಮ:** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು 'ಭಾವನಾಮ' ಎನ್ನುತ್ತಾರೆ. ಭಾವ ಎಂದರೆ ಇರುವಿಕೆ, ಸ್ಥಿತಿ ಎಂದು ಅರ್ಥೈಸಬಹುದು.

| ಉದಾ: | | |
|---|---|---|
| | ಬಿಳಿಯದರ ಭಾವ | – ಬಿಳುಪು |
| | ಕರಿಯದರ ಭಾವ | – ಕಪ್ಪು |
| | ಆಡುವುದರ ಭಾವ | – ಆಟ |
| | ನೋಡುವುದರ ಭಾವ | – ನೋಟ |

**6. ಪರಿಮಾಣ ವಾಚಕ:** ವಸ್ತಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು 'ಪರಿಮಾಣ ವಾಚಕ' ಎನ್ನುತ್ತಾರೆ.

**ಉದಾ:** ಪರಿಮಾಣ – ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)

ಗಾತ್ರ – ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)

ಅಳತೆ – ಅಷ್ಟು, ಇಷ್ಟು (ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿಗಳು.

7. **ಪ್ರಕಾರ ವಾಚಕ:** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು 'ಪ್ರಕಾರ ವಾಚಕ' ಎನ್ನುವರು. ಇವು ಒಂದು ಬಗೆಯ ಗುಣವಾಚಕಗಳೇ ಆಗಿವೆ.

**ಉದಾ:** ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಇಂತಹುದು, ಎಂತಹ, ಎಂಥ, ಅಂಥವನು, ಅಂಥವಳು ಇತ್ಯಾದಿ.

8. **ದಿಗ್ವಾಚಕಗಳು:** ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು 'ದಿಗ್ವಾಚಕ' ಎನ್ನುವರು.

**ಉದಾ:** ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ವಾಯವ್ಯ, ನೈರುತ್ಯ, ತೆಂಕಣ, ಬಡಗಣ, ಮೂಡಣ, ಪಡುವಣ, ಆಚೆ, ಈಚೆ – ಇತ್ಯಾದಿ

9. **ಸರ್ವನಾಮ:** ವಸ್ತು ವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ನಿಂತು ಅವನ್ನು ಸೂಚಿಸುವ ಶಬ್ದಗಳನ್ನು 'ಸರ್ವನಾಮ' ಎನ್ನುತ್ತೇವೆ. ಅಂದರೆ ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು.

**ಉದಾ:** ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ, ಅದಕ್ಕೆ – ಇತ್ಯಾದಿ.

ಸರ್ವನಾಮಗಳನ್ನು 'ಪುರುಷಾರ್ಥಕ ಸರ್ವನಾಮ', 'ಆತ್ಮಾರ್ಥಕ ಸರ್ವನಾಮ', ಪ್ರಶ್ನಾರ್ಥಕ ಸರ್ವನಾಮ' ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು.





**1. ಪುರುಷಾರ್ಥಕ ಸರ್ವನಾಮ:** ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.

**ಅ. ಉತ್ತಮ ಪುರುಷ:** ಮಾತನಾಡುವ ವ್ಯಕ್ತಿ ತನ್ನನ್ನು ನಿರ್ದೇಶಿಸಿಕೊಳ್ಳುವ ಸರ್ವನಾಮಗಳನ್ನು 'ಉತ್ತಮ ಪುರುಷ' ಎನ್ನಲಾಗುತ್ತದೆ.

**ಉದಾ:** ನಾನು, ನಾವು.

**ಆ. ಮಧ್ಯಮ ಪುರುಷ:** ಮಾತನಾಡುವವನು ತನ್ನ ಮುಂದಿರುವ ವ್ಯಕ್ತಿಯನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಮಧ್ಯಮ ಪುರುಷ' ಎನ್ನಲಾಗುತ್ತದೆ.

**ಉದಾ:** ನೀನು, ನೀವು, ತಾವು.

**ಇ. ಪ್ರಥಮ ಪುರುಷ:** ಮಾತನಾಡುವವನಿಂದ ದೂರವಿರುವ ವ್ಯಕ್ತಿ ಇಲ್ಲವೇ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಪ್ರಥಮ ಪುರುಷ' ಎನ್ನಲಾಗುತ್ತದೆ

**ಉದಾ:** ಅವರು, ಅವನು, ಅವಳು, ಅದು, ಅವು, ಇದು, ಇವು.

**2. ಆತ್ಮಾರ್ಥಕ ಸರ್ವನಾಮ:** ಮಾತನಾಡುವವನು ತನ್ನನ್ನು ಹಾಗೂ ಇತರರನ್ನು ಗೌರವಸೂಚಕವಾಗಿ ಆತ್ಮಪ್ರಶಂಸೆಯಿಂದ ಬಳಸುವ ಸರ್ವನಾಮಗಳನ್ನು 'ಆತ್ಮಾರ್ಥಕ ಸರ್ವನಾಮ' ಎನ್ನುತ್ತಾರೆ. ಇವು ಸಾಮಾನ್ಯವಾಗಿ ಪ್ರಥಮ ಹಾಗೂ ಮಧ್ಯಮ ಪುರುಷದ ಅರ್ಥವನ್ನೇ ನೀಡುತ್ತವೆ.

**ಉದಾ:** ತಾನು, ತಾವು, ತನ್ನ, ತಮ್ಮ.





**3. ಪ್ರಶ್ನಾರ್ಥಕ ಸರ್ವನಾಮ:** ಪ್ರಶ್ನೆಯಿಂದ ಕೂಡಿದ ಎಲ್ಲ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮ ಎನ್ನಲಾಗುತ್ತದೆ.

**ಉದಾ:** ಏಕೆ? ಏನು? ಯಾರು?

ಯಾವುವು? ಯಾವಳು? ಹೇಗೆ?

ಯಾವುದು? ಏತರದು? ಆವುದು?